# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 304 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ಆರ್. ಪಾಟೀಲ್. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | 16-07-2019 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕನ್ನಡ ವಿಶ್ವವಿದ್ಯಾಲಯದ ನೌಕರರೊಬ್ಬರ ವಿರುದ್ಧ ವಿಶ್ವವಿದ್ಯಾಲಯ ಜಿಲ್ಲಾ ನ್ಯಾಯಾಧೀಶರು ವಿಚಾರಣೆ ನಡೆಸಿ ನೀಡಿದ ವರದಿಯಲ್ಲಿ ಆರೋಪಗಳು ಸಾಬೀತಾದರೂ ಅವರ ಮೇಲೆ ವಿಶ್ವವಿದ್ಯಾಲಯ ಯಾಕೆ ಕ್ರಮಕೈಗೊಂಡಿಲ್ಲ; | ವಿಚಾರಣಾ ವರದಿಯಲ್ಲಿ ಸಾಬೀತಾದ ಆರೋಪಗಳನ್ನು ಸಮರ್ಥಿಸುವ ಸಾಕ್ಷ್ಯಗಳನ್ನು/ ದಾಖಲೆಗಳನ್ನು ಒದಗಿಸದೇ ಇದ್ದುದರಿಂದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿರುವುದಿಲ್ಲ. |
| ಆ) | ಶಿವಶರಣೆ ಅಕ್ಕಮಹಾದೇವಿ, ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ ಅವರುಗಳನ್ನು ಅಂತರ್ಜಾಲದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಈ ನೌಕರನ ಮೇಲೆ ವಿಶ್ವವಿದ್ಯಾಲಯ ಏನು ಕ್ರಮಕೈಗೊಂಡಿದೆ. | ಖಾಸಗಿ ದೂರಿನ ತನಿಖೆಗೆ ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ತಡೆಯಾಜ್ಞೆ ನೀಡಿರುತ್ತದೆ. |
| ಇ) | ಮಹಿಳೆಯರನ್ನು ಅಂತರ್ಜಾಲದಲ್ಲಿ ಅವಮಾನ ಮಾಡಿರುವುದು ಸಾಬೀತಾದರೂ ಕನ್ನಡ ವಿಶ್ವವಿದ್ಯಾಲಯದ ನೌಕರರೊಬ್ಬರನ್ನು ಸದರಿ ನೌಕರರಿಗೆ ಯಾವುದೇ ಷರತ್ತಿಲ್ಲದೆ ಕಾರಾಗೃಹದಲ್ಲಿ ಇದ್ದ ಅವಧಿಯನ್ನು ಸೇವಾ ಅವಧಿ ಎಂದು ಪರಿಗಣಿಸಿ ಯಾವ ನಿಯಮದಡಿ ಅಮಾನತ್ತು ಆದೇಶವನ್ನು ಹಿಂಪಡೆಯಲಾಗಿದೆ. | ಆರೋಪಿತ ನೌಕರನನ್ನು 2 ವರ್ಷಗಳಿಂದ ಅಮಾನತ್ತಿನಲ್ಲಿ ಇರಿಸಲಾಗಿತ್ತು ಸಿ.ಸಿ.ಎ ನಿಯಮಾವಳಿ ಪ್ರಕಾರ ಅಮಾನತ್ತು ಹಿಂಪಡೆಯಲಾಗಿದೆ. |

ಸಂಖ್ಯೆ: ಇಡಿ 08 ಕೆವಿವಿ 2019

(ಜಿ.ಟಿ.ದೇವೇಗೌಡ)

ಉನ್ನತ ಶಿಕ್ಷಣ ಸಚಿವರು